**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ನ್ಯಾಯಾಲಯ, ಮುಳಬಾಗಿಲು</u>**

**ಓಎಸ್ ನಂ. 258/2021**

**ಪಿಡಬ್ಲ್ಯೂಃ 2**

**ದಿನಾಂಕಃ04.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಪ್ರತಿವಾದಿಯ ಪರ ವಕೀಲರಾದ ಶ್ರೀ ಪಿಎಂಎಸ್ ರವರಿಂದಃ</u>**

ನಾನು ದ್ವಿತೀಯ ಪಿಯುಸಿವರೆಗೆ ಓದಿರುತ್ತೇನೆ. ವಾದಿ 1 ರಿಂದ 3 ನೇ ಪ್ರತಿವಾದಿಗಳ ವಿರುದ್ಧ ಈ ದಾವೆ ಹಾಕಿರುತ್ತಾರೆ. ವಾದಿ ನನ್ನದೇ ಸ್ವತ್ತು ಎಂದು ಕೇಸು ಹಾಕಿರುತ್ತಾರೆ. ವಾದಿ ಏನು ಪರಿಹಾರ ಕೇಳಿರುತ್ತಾರೆ ಎಂದು ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಗಳು ಒಂದೇ ಕುಟುಂಬದವರು ಎಂದರೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಗಳು ಒಂದೇ ವಠಾರದಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಗೊತ್ತಿಲ್ಲ. ದಾವಾ ಸ್ವತ್ತಿನ ಅಸಸ್ ಮೆಂಟ್ ನಂಬರ್ 25 ಮತ್ತು 26. ದಾವಾ ಐಟಂ ನಂಬರ್ 1 ವಾದಿಗೆ ಅವರ ತಾತನ ಕಡೆಯಿಂದ ಬಂದಿರುತ್ತದೆ. ವಾದಿಯ ತಾತನ ಹೆಸರು ವೆಂಕಟರಾಮಯ್ಯ. ವಾದಿಗೆ ಅವರ ತಾತನಿಂದ ಬಂದಿರುವ ಬಗ್ಗೆ ದಾಖಲೆ ನೋಡಿರುವುದಿಲ್ಲ. ವಾದಿಯ ತಂದೆಯ ಹೆಸರು ಚಿಕ್ಕಮುನಿಸ್ವಾಮಿ. ವಾದಿಯ ಹೆಸರಿಗೆ ಪವತಿ ವಾರಸು ಖಾತೆ ಆಗಿದೆಯಾ ಎಂದರೆ ಗೊತ್ತಿಲ್ಲ.

ದಾವಾ ಸ್ವತ್ತು ಯಾರ ಹೆಸರಿನಿಂದ ಯಾರ ಹೆಸರಿಗೆ ಬಂದಿದೆ ಎಂಬ ಬಗ್ಗೆ ದಾಖಲೆ ನೋಡಿರುತ್ತೇನೆ. ಸಾಕ್ಷಿಗೆ ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತು 1 ಮತ್ತು 2 ನೇ ಪ್ರತಿವಾದಿಗಳ ಪಿತ್ರಾರ್ಜಿತ ಸ್ವತ್ತಾಗಿದ್ದು, ವಾದಿಯೊಂದಿಗೆ ಸೇರಿಕೊಂಡು ದಾಖಲೆ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾಐಟಂ ನಂಬರ್ 1 ರ ಪೂರ್ವಕ್ಕೆ ಚಿಕ್ಕರೆಡ್ಡಪ್ಪ, ಪಶ್ಚಿಮಕ್ಕೆ ವೆಂಕಟಪ್ಪಚಾರಿ, ಸಾವಿತ್ರಮ್ಮ, ಪಜಲ್ ವುಲ್ಲಾ ಖಾನ್, ಉತ್ತರಕ್ಕೆ ಮತ್ತು ದಕ್ಷಿಣಕ್ಕೆ ರಸ್ತೆ. ನಾನು ಹೇಳಿರುವ ಚೆಕ್ಕು ಬಂದಿ ಸುಳ್ಳು ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 1 ರ ವಿಸ್ತೀರ್ಣ ಪೂರ್ವ ಪಶ್ಚಿಮ 42, ಉತ್ತರ ದಕ್ಷಿಣ 106 ಅಡಿ ಇರುತ್ತದೆ.

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ಗೊತ್ತಿಲ್ಲ. ದಾವಾ ಐಟಂ ನಂಬರ್ 2 ಅಸಸ್ ಮೆಂಟ್ ನಂಬರ್ 26. ದಾವಾ ಐಟಂ ನಂಬರ್ 2 ಕೂಡಾ ವಾದಿಯ ತಾತನ ಸ್ವತ್ತು. ದಾವಾ ಸ್ವತ್ತು ವಾದಿಯ ತಾತನಿಂದ ವಾದಿಯ ಹೆಸರಿಗೆ ವರ್ಗಾವಣೆ ಆಗಿರುವುದನ್ನು ನೋಡಿದ್ದೀರಾ ಎಂದರೆ ನೋಡಿರುವುದಿಲ್ಲ. ದಾವಾ ಐಟಂ ನಂಬರ್ 2ರ ಸ್ವತ್ತಿನಲ್ಲಿ ಜೆಸಿಬಿ, ಟ್ರಾಕ್ಟರ್ ಗಳನ್ನು ಹಾಕಿಕೊಂಡಿದ್ದಾರೆ ಮತ್ತು ಅದೇ ಜಾಗದಲ್ಲಿ ವಾಸವಾಗಿದ್ದಾರೆ. ದಾವಾ ಸ್ವತ್ತಿನಲ್ಲಿ ಹೆಂಚಿನ ಮನೆ, ಅಂಕಣದ ಮನೆ ಇರುತ್ತದೆ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಜೆಸಿಬಿ, ಟ್ರಾಕ್ಟರ್, ಹೆಂಚಿನ ಮನೆ, ಅಂಕಣದ ಮನೆ ಇರುವುದನ್ನು ಬರೆಸಿರುತ್ತೇನೆ. ನನ್ನ ಮುಖ ವಿಚಾರಣಾ ಪ್ರಮಾಣ ಪತ್ರದಲ್ಲಿ ವಾದಿಗೆ ಅವರ ತಾತನಿಂದ ವರ್ಗಾವಣೆ ಆಗಿದೆ ಎಂಬ ವಿಚಾರ ಬರೆದಿದೆಯಾ ಎಂದರೆ ಗೊತ್ತಿಲ್ಲ.

ಈ ಕೇಸಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಪ್ರತಿವಾದಿಗಳಿಗೂ ನನಗೂ ಆಗದೇ ಇರುವುದರಿಂದ ವಾದಿಯ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ವಾದಿಗೆ ಯಾವುದೇ ಹಕ್ಕು ಸ್ವಾಧೀನ ಇಲ್ಲದಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೆ. ಸ. ಇದೆ.

ಸಹಿ/-
(ಶ್ರೀಮತಿ ರೋಹಿಣಿ. ಡಿ)
ಅಪರ ಸಿ.ಜೆ ಮತ್ತು ಜೆಎಂಎಫ್ ಸಿ
ಮುಳಬಾಗಿಲು